ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/11/2015-16

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು 31.3.2016
ನಾಡಕಛೇರಿ ಹಂಪಸಾಗರ

| | |
|---|---|
| ವಾದಿಗಳು | ಪ್ರತಿವಾದಿಗಳು |
| ಶ್ರೀಮತಿ ನುಪ್ಪಣ್ಣನವರ ದುರುಗಮ್ಮ | ಶ್ರೀ ಸಣ್ಣ ಬಸಪ್ಪ |
| ಗಂಡ ಬಸಪ್ಪ | ತಂದೆ ಚನ್ನಬಸಪ್ಪ |
| ಗ್ರಾಮ ಕೊಂಡೇನಹಳ್ಳಿ | ಗ್ರಾಮ ಕೊಂಡೇನಹಳ್ಳಿ |

**ವಿಷಯ :- ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಗದ್ದಿಕೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ 113/ಬಿ ವಿಸ್ತೀರ್ಣ 11-20 ಎಕರೆ ಜಮೀನು ಪವತಿ ವಾರಸು ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು ದಾಖಲಾಗಿದ್ದು ವಿಚಾರಣೆ.**

ಪೀಠಿಕೆ :-

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಗದ್ದಿಕೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 113/ಬಿ ವಿಸ್ತೀರ್ಣ 11-20 ಎಕರೆ ಜಮೀನಿಗೆ ವಾದಿಗಳು ನಿಗದಿತ ನಮೂನೆಯೊಂದಿಗೆ ಪವತಿ ವಾರಸು ಪ್ರಕಾರ ಹಕ್ಕುಬದಲಾವಣೆ ಹೊಂದಲು ತಾಲೂಕು ಭೂಮಿ ಕೇಂದ್ರದಲ್ಲಿ ಅರ್ಜಿ ದಾಖಲಾಗಿ ವಹಿವಾಟು ಸಂಖ್ಯೆ 284/2014-15 ಹಾಗೂ ಎಂ.ಆರ್.ಸಂಖ್ಯೆ ಹೆಚ್-14/2014-15 ರಂತೆ ದಾಖಲು ಆಗಿ ಪ್ರಕರಣಕ್ಕೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಗದ್ದಿಕೇರಿ ಇವರಿಗೆ ರವಾನಿಸಲಾಗಿ, ಗ್ರಾಮ ಲೆಕ್ಕಾಧಿಕಾರಿ ಗದ್ದಿಕೇರಿ ಇವರು ಪ್ರಕರಣದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಸದರಿ ಪ್ರಕರಣಕ್ಕೆ ಪ್ರತಿವಾದಿಗಳು ತಮ್ಮ ತಕರಾರನ್ನು ಭೂಮಿ ಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 7949/2014-15 ರಂತೆ ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ

ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ : 10-06-2015 ರಿಂದ 31-03-2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿ ಗ್ರಾಮದ ಹಿರಿಯರ ಸಮ್ಮುಖದಲ್ಲಿ ಮಾಡಿಕೊಂಡ ಒಪ್ಪಿಗೆ ಪತ್ರ ಹಾಜರು ಪಡಿಸುತ್ತಾ ವಿವಾದಿತ ಆಸ್ತಿಯು ವಿಭಕ್ತ ಕುಟುಂಬದ ಜಂಟೀ ಹಕ್ಕುದಾರರ ಹಿಡುವಳಿಯಲ್ಲಿರುವುದಾಗಿ ತಿಳಿಸುತ್ತಾ, ಸದರಿ ಅರ್ಜಿಯನ್ನು ರದ್ದುಪಡಿಸಲು ಒಪ್ಪಿಗೆ ಪತ್ರ ಹಾಜರುಪಡಿಸಿರುತ್ತಾರೆ. ಸ್ವ-ಇಚ್ಛೆಯಿಂದ ಹಾಜರುಪಡಿಸಿದ ಒಪ್ಪಿಗೆ ಪತ್ರದ ಪ್ರಕಾರ ಪ್ರಕರಣವನ್ನು ಮುಕ್ತಗೊಳಿಸುತ್ತಾ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಗದ್ದಿಕೇರಿ ಗ್ರಾಮಕ್ಕೆ ಸೇರಿದ ಜಮೀನು ಸರ್ವೇನಂಬರ್ 113/ಬಿ ವಿಸ್ತೀರ್ಣ 11-20 ಎಕರೆ ಜಮೀನಿನ ಹಕ್ಕು ಬದಲಾವಣೆ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದೆ. ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ:31.3.16 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :

1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ